**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಶ್ರೀಮತಿ ರಾಜಮ್ಮ, ಹಿಂದಿನ ಅಧ್ಯಕ್ಷರು, ಅತ್ತಹಳ್ಳಿ ಗ್ರಾಮ ಪಂಚಾಯಿತಿ, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ಅಧಿನಿಯಮ 1993 ರ ಪ್ರಕರಣ 43(ಎ)(vi)ರನ್ವಯಕ್ರಮ ಕೈಗೊಳ್ಳುವ ಬಗ್ಗೆ.

**ಓದಲಾಗಿದೆ:**

1. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ ಇವರ ಕರ್ನಾಟಕ ಲೋಕಾಯಕ್ತ ಕಾಯ್ದೆ ಕಲಂ–12(3) ವರದಿ ಸಂಖ್ಯೆ:ಕಂಪ್ಲೆಂಟ್/ಉಪಲೋಕ್/ ಎಂವೈಎಸ್ /269/2017/ ಉನಿವಿ–4, ದಿನಾಂಕ:12.03.2019.
2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ1135ಗ್ರಾಪಂಅ 2018 ದಿನಾಂಕ:02.02.2019
3. ಸರ್ಕಾರದ ಪತ್ರ ಸಂಖ್ಯೆ:ಗ್ರಾಅಪ175 ಗ್ರಾಪಂಕಾ 2019 ದಿನಾಂಕ:20.04.2019
4. ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು,ಇವರ ವಿಚಾರಣಾ ವರದಿ ಸಂಖ್ಯೆ:ಚುನಾವಣೆ/ಸಿಆರ್:08/2019–20 ದಿನಾಂಕ:18.03.2020
5. ಸರ್ಕಾರದ ವಿಚಾರಣಾ ನೋಟೀಸ್ ಸಂಖ್ಯೆ:: ಗ್ರಾಅಪ175 ಗ್ರಾಪಂಕಾ 2019, ದಿನಾಂಕ:03.06.2021, 21.08.2021, 26.08.2021 ಮತ್ತು 03.09.2021.

*****

ಶ್ರೀಮತಿ ರಾಜಮ್ಮ, ಹಿಂದಿನ ಅಧ್ಯಕ್ಷರು, ಅತ್ತಹಳ್ಳಿ ಗ್ರಾಮ ಪಂಚಾಯಿತಿ, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ)ಇವರು ತಮ್ಮ ಅಧಿಕಾರಾವಧಿಯಲ್ಲಿ ಈ ಕೆಳಕಂಡ ಆರೋಪಗಳನ್ನು ಎಸಗಿರುವುದರಿಂದ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದಡಿ ಕ್ರಮ ಕೈಗೊಳ್ಳುವಂತೆ ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ ಇವರು, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ–12(3) ರಡಿಯಲ್ಲಿ ಮೇಲೆ ಓದಲಾದ (1) ರಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

**ದೋಷಾರೋಪಣೆ:–**

ಟಿ. ನರಸೀಪುರ ತಾಲ್ಲೂಕು, ಅತ್ತಹಳ್ಳಿ ಗ್ರಾಮದ ಪರಿಶಿಷ್ಟ ಜಾತಿ ಕಾಲೋನಿ ಪಂಪ್‌ಹೌಸ್ ಸುತ್ತ ತಂತಿ ಬೇಲಿ ಮತ್ತು ಗೇಟ್ ನಿರ್ಮಾಣ ಆಗಿದ್ದು, ಸದರಿ ಕಾಮಗಾರಿಯ ಅಂದಾಜು ರೂ.30,200/– ಆಗಿದ್ದು, 2014–15ನೇ ಸಾಲಿನ 13ನೇ ಹಣಕಾಸು ಯೋಜನೆಯಡಿ ಸದರಿ ಕಾಮಗಾರಿಯನ್ನು ಅತ್ತಹಳ್ಳಿ ಗ್ರಾಮ ಪಂಚಾಯತ್ ವತಿಯಿಂದ ನಿರ್ವಹಿಸಿದ್ದು, ಸದರಿ ಕಾಮಗಾರಿಯನ್ನು ಶ್ರೀ ಜಯರಾಂ. 3ನೇ ದರ್ಜೆ ಗುತ್ತಿಗೆದಾರರಿಂದ 1ನೇ ಆಪಾದಿತ ಸರ್ಕಾರಿ ನೌಕರರಾದ ಶ್ರೀ ವಿ.ಟಿ ಪ್ರಕಾಶ್. ಕಿರಿಯ ಇಂಜಿನಿಯರ್ ರವರು ನಿರ್ವಹಿಸಿದ್ದು, ಸದರಿ ಕಾಮಗಾರಿಯ ಬಾಬ್ತು ಗುತ್ತಿಗೆದಾರರಿಗೆ ಒಟ್ಟು ರೂ.30,144/–ನ್ನು ದಿನಾಂಕ:02.08.2016

...2

ರಂದು ಸಂದಾಯ ಮಾಡಿದ್ದು, ಅದರ ಬಾಬ್ತು ಬಿಲ್ಲಿಗೆ 2ನೇ ಆಪಾದಿತ ಸರ್ಕಾರಿ ನೌಕರರಾದ ಶ್ರೀಮತಿ ರೂಪಶ್ರೀ, ಅಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಅತ್ತಹಳ್ಳಿ ಗ್ರಾಮ ಪಂಚಾಯಿತಿ ಹಾಗೂ ಅಧ್ಯಕ್ಷರಾದ ಶ್ರೀಮತಿ ರಾಜಮ್ಮರವರು ಸಹಿ ಮಾಡಿರುತ್ತಾರೆ.

**ಕಾಮಗಾರಿ ಅಂದಾಜಿನನ್ವಯ:-**

1. ತಂತಿ ಬೇಲಿಗಾಗಿ 1.80 ಮೀಟರ್ ಎತ್ತರದ 16 ಆರ್‌ಸಿಸಿ ಕಂಬಗಳನ್ನು ಬಳಸಬೇಕು:
2. ಕಂಬಗಳನ್ನು ನೆಡಲು 0.6 ಮೀಟರ್ ಗುಂಡಿ ತೆಗೆಯಬೇಕು:
3. 1.2 ಮೀಟರ್ ಎತ್ತರ ತಂತಿ ಬೇಲಿ ನಿರ್ಮಾಣ ಮಾಡಬೇಕು:
4. ತಂತಿ ಬೇಲಿಯ ಉದ್ದ 49 ಮೀಟರ್ ಆಗಿರಬೇಕು:
5. ಎಂ.ಎಸ್. ಗೇಟ್ ನಿರ್ಮಾಣ ಅಳತೆ 1.50 ಇಂಟು 1.45 ಮೀಟರ್

**ಆದರೆ, ತನಿಖಾ ವರದಿಯನ್ವಯ ಸ್ಥಳದಲ್ಲಿ:-**

1. 10 ಕಂಬಗಳಿಗೆ ಗುಂಡಿ ತೆಗೆದು ಕಂಬಗಳನ್ನು ನೆಡಲಾಗಿದ್ದು, ಉಳಿದ 06 ಕಂಬಗಳನ್ನು ಸದರಿ 10 ಕಂಬಗಳಿಗೆ ಒರಗಿಸಿದೆ:
2. ಆರ್.ಸಿ.ಸಿ. ಕಂಬಗಳ ಬದಲಾಗಿ ಕಲ್ಲಿನ ಕಂಬಗಳನ್ನು ಕಾಮಗಾರಿಯಲ್ಲಿ ಬಳಸಿದೆ:
3. ನಿರ್ಮಾಣ ಮಾಡಲಾದ ತಂತಿ ಬೇಲಿಯ ಉದ್ದ 24.95 ಮೀಟರ್ ಆಗಿದೆ:
4. ನಿರ್ಮಿಸಲಾದ ಎಂ.ಎಸ್. ಗೇಟ್‌ನ ಅಳತೆ 1.5 ಇಂಟು 1.55 ಮೀಟರ್ ಇರುವುದು ಕಂಡು ಬಂದಿರುತ್ತದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್‌ಅಧಿನಿಯಮ 1993 ರ 43(ಎ), 48(4) ಮತ್ತು 48(5) ರಡಿ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರುಗಳು ಹಾಗೂ ಸದಸ್ಯರುಗಳ ಮೇಲಿನ ಆರೋಪಗಳಿಗೆ ವಿಚಾರಣೆ ನಡೆಸಲು ಮೇಲೆ ಕ್ರಮಾಂಕ (2)ರಲ್ಲಿ ಪ್ರಾದೇಶಿಕ ಆಯುಕ್ತರುಗಳಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿದ್ದು, ಅದರನ್ವಯ ಸದರಿ ಪ್ರಕರಣದ ವಿಚಾರಣೆ ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು ರವರಿಗೆ ಮೇಲೆ ಓದಲಾದ ಕ್ರಮಾಂಕ(3)ರ ಪತ್ರದಲ್ಲಿ ವಹಿಸಲಾಗಿತ್ತು.

ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು ಇವರು ಈ ಪ್ರಕರಣದ ವಿಚಾರಣೆ ನಡೆಸಿ, ಎದುರುದಾರರಾದ ಶ್ರೀಮತಿ ರಾಜಮ್ಮ, ಹಿಂದಿನ ಅಧ್ಯಕ್ಷರು, ಅತ್ತಹಳ್ಳಿ ಗ್ರಾಮ ಪಂಚಾಯಿತಿ, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ಇವರ ಮೇಲಿನ ಆರೋಪವು ಉದ್ದೇಶ ಪೂರ್ವಕವಾಗಿ ಮಾಡಿರುವ ಬಗ್ಗೆ ಸಾಬೀತಾಗಿರುವುದಿಲ್ಲ ಮತ್ತು ಸದರಿಯವರಿಗೆ ಕಾನೂನು ಮತ್ತು ನಿಯಮಗಳ ಅರಿವು ಇಲ್ಲದಿರುವುದರಿಂದ ಈ ಪ್ರಕರಣವನ್ನು ಮುಕ್ತಾಯಗೊಳಿಸಬಹುದಾಗಿ ಅಭಿಪ್ರಾಯಪಟ್ಟು ಮೇಲೆ ಓದಲಾದ ಕ್ರಮಾಂಕ (4)ರಲ್ಲಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುತ್ತಾರೆ.

ಪ್ರಾದೇಶಿಕ ಆಯುಕ್ತರ ವರದಿಯು ಅಂಗೀಕಾರಾರ್ಹವಾಗಿಲ್ಲದ್ದರಿಂದ ಪ್ರಕರಣವನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಅರೆ ನ್ಯಾಯಿಕ

ನ್ಯಾಯಾಲಯದಲ್ಲಿ ವಿಚಾರಣೆ ನಡೆಸಲು ನಿರ್ಣಯಿಸಿ ಮೇಲೆ ಓದಲಾದ ಕ್ರಮಾಂಕ (5) ರಲ್ಲಿ ವಿಚಾರಣಾ ನೋಟೀಸ್‌ನ್ನು ಜಾರಿ ಮಾಡಿ ವಿಚಾರಣೆಗೆ ಒಳಪಡಿಸಲಾಗಿದೆ.

ಸದರಿ ಎರಡೂ ವಿಚಾರಣೆಗಳಿಗೂ ಸಹ ಎದುರುದಾರರು ಗೈರು ಹಾಜರಾಗಿದ್ದು, ಸದರಿವರ ಪರವಾಗಿ ಯಾರು ಹಾಜರಾಗಿರುವುದಿಲ್ಲ.

ಎದುರುದಾರರಿಗೆ ತಮ್ಮ ಅಹವಾಲು ಸಲ್ಲಿಸಲು ಸಾಕಷ್ಟು ಅವಕಾಶವನ್ನು ನೀಡಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಚುನಾಯಿತ ಜನಪ್ರತಿನಿಧಿಗಳಿಗೆ ಅಗತ್ಯ ತರಬೇತಿಗಳನ್ನು ನೀಡಲಾಗಿರುವುದರಿಂದ ಸದರಿ ಪ್ರಕರಣಕ್ಕೆ ಎದುರುದಾರರೂ ಕೂಡ ಜವಾಬ್ದಾರರಾಗಿರುತ್ತಾರೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಅಧಿನಿಯಮ ಪ್ರಕರಣ 43(ಎ) ಹಾಗೂ 48(4) ರಡಿ ಸದರಿ ಪ್ರಕರಣವನ್ನು ಪರಿಶೀಲಿಸಿದಾಗ, ಎರುರುದಾರರಾದ ಶ್ರೀಮತಿ ರಾಜಮ್ಮ, ಹಿಂದಿನ ಅಧ್ಯಕ್ಷರು, ತಮ್ಮ ಅಧಿಕಾರಾವಧಿಯಲ್ಲಿ ಅಧಿಕಾರ ದುರುಪಯೋಗಪಡಿಸಿಕೊಂಡಿರುವುದು ಕಂಡು ಬಂದಿರುತ್ತದೆ.

ಶ್ರೀಮತಿ ರಾಜಮ್ಮ, ಹಿಂದಿನ ಅಧ್ಯಕ್ಷರು, ಅತ್ತಹಳ್ಳಿ ಗ್ರಾಮ ಪಂಚಾಯಿತಿ, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ಇವರು ಪ್ರಸ್ತುತ ಗ್ರಾಮ ಪಂಚಾಯಿತಿಯ ಸದಸ್ಯರಲ್ಲದ ಕಾರಣ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್(ತಿದ್ದುಪಡಿ) ಅಧಿನಿಯಮ 1993ರ ಪ್ರಕರಣ 43(ಎ)(vi) ರಡಿ ಹಾಗೂ ಸದರಿ ಅಧಿನಿಯಮದ 12(ಎಲ್) ರನ್ವಯ ಕ್ರಮ ಜರುಗಿಸಲು ಸರ್ಕಾರವು ನಿರ್ಣಯಿಸಿ, ಅದರಂತೆ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 175 ಗ್ರಾಪಂಕಾ 2019, ಬೆಂಗಳೂರು, ದಿನಾಂಕ:23.11.2021.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀಮತಿ ರಾಜಮ್ಮ, ಹಿಂದಿನ ಅಧ್ಯಕ್ಷರು, ಅತ್ತಹಳ್ಳಿ ಗ್ರಾಮ ಪಂಚಾಯಿತಿ, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ಇವರ ವಿರುದ್ಧದ ಅಧಿಕಾರ ದುರುಪಯೋಗಪಡಿಸಿಕೊಂಡಿರುವ ಆರೋಪವು ಸಾಬೀತಾಗಿದ್ದು, ಸದರಿಯವರು ಪ್ರಸ್ತುತ ಗ್ರಾಮ ಪಂಚಾಯಿತಿಯ ಸದಸ್ಯರಲ್ಲದ ಕಾರಣ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್(ತಿದ್ದುಪಡಿ) ಅಧಿನಿಯಮ-1993ರ ಪ್ರಕರಣ 43(ಎ)(vi) ರಡಿ ಹಾಗೂ ಸದರಿ ಅಧಿನಿಯಮದ 12(ಎಲ್) ರನ್ವಯ ಆರು ವರ್ಷಗಳ ಕಾಲ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತುಅವರ ಹೆಸರಿನಲ್ಲಿ,

(ಚೇತನ ಎಂ.) 23/11/21
ಸರ್ಕಾರದಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್‌ಇಲಾಖೆ. (ಜಿ.ಪಂ)

23/11/21

<u>ಗೆ:</u>

1) ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು.

...4

2) ಆಯುಕ್ತರು, ಪಂಚಾಯತ್‌ರಾಜ್‌ಆಯುಕ್ತಾಲಯ, ಕೆ.ಜಿರಸ್ತೆ, ಬೆಂಗಳೂರು.-09
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4) ಮುಖ್ಯಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಮೈಸೂರು ಜಿಲ್ಲೆ.
5) ಕಾರ್ಯನಿರ್ವಾಹಕಾಧಿಕಾರಿ, ತಾಲ್ಲೂಕು ಪಂಚಾಯಿತಿ ಟಿ. ನರಸೀಪುರ, ಮೈಸೂರು ಜಿಲ್ಲೆ.
6) ಶ್ರೀಮತಿ ರಾಜಮ್ಮ, ಹಿಂದಿನ ಅಧ್ಯಕ್ಷರು, ಅತ್ತಹಳ್ಳಿ ಗ್ರಾಮ ಪಂಚಾಯಿತಿ, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.
7) ಗಣಕ ಕೋಶ–ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
8) ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.

**ಪ್ರತಿಯನ್ನು ಮಾಹಿತಿಗಾಗಿ:**

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3) ನಿರ್ದೇಶಕರು(ಪಂ.ರಾಜ್–1), ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.